ಮೀನು ಸಾಕಾಣಿಕೆ

233(206) ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ;

ಆ) ಮೀನು ಸಾಕಾಣಿಕೆಯ ಗುತ್ತಿಗೆಯನ್ನು ಬಂಡವಾಳಗಾರರಿಗೆ ಮಾತ್ರ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೀನು ಹಿಡಿದು ಜೀವನ ಸಾಗಿಸುತ್ತಿರುವವರನ್ನು ಸೇರಿಸಿ ಸಮಿತಿ ಮಾಡಿ ಆ ಸಮಿತಿಗೆ ಮೀನು ಹಿಡಿಯುವ ಗುತ್ತಿಗೆ ಕೊಡುವುದರ ಬಗ್ಗೆ ಸರ್ಕಾರದ ನಿಲುವೇನು;

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) 2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಮೀನುಗಾರಿಕಾ ಇಲಾಖೆ ವ್ಯಾಪ್ತಿಯ ಒಟ್ಟು 1938 ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗಿದೆ.

ಆ) ರಾಜ್ಯದ ಒಳನಾಡು ಜಲಸಂಪನ್ಮೂಲಗಳಲ್ಲಿ ಮೀನು ಪಾಶುವಾರು ಹಕ್ಕನ್ನು ಬಂಡವಾಳದಾರರಿಗೆ ಗುತ್ತಿಗೆಗೆ ನೀಡುತ್ತಿಲ್ಲ. 2013–14ನೆಯ ಸಾಲಿನಲ್ಲಿ ಮೀನು ಪಾಶುವಾರು ಹಕ್ಕನ್ನು ಮೀನುಗಾರರ ಸಹಕಾರ ಸಂಘಗಳಿಗೆ ಮತ್ತು ಇತರೆ ಸಂಘಗಳಿಗೆ ಗುತ್ತಿಗೆಗೆ ನೀಡಲಾಗಿದೆ. ಉಳಿದ ಜಲಸಂಪನ್ಮೂಲಗಳನ್ನು ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

ಇ) ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/125ಮೀಇಇ/2013, ದಿನಾಂಕ:21–02–2014ರ ಪ್ರಕಾರ ಇಲಾಖಾ ವ್ಯಾಪ್ತಿಯಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನಿಯಮಾನುಸಾರ ಆದ್ಯತೆಯ ಮೇಲೆ ಮೀನುಗಾರರ ಸಹಕಾರ ಸಂಘಗಳಿಗೆ ನೇರ ಗುತ್ತಿಗೆ ಮೂಲಕ ನೀಡಲಾಗುತ್ತಿದೆ. ಉಳಿದ ಜಲಸಂಪನ್ಮೂಲಗಳ ಮೀನು

ಪಾಶುವಾರು ಹಕ್ಕನ್ನು ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ಈ ಮೀನುಗಾರರ ಸಹಕಾರ ಸಂಘಗಳಲ್ಲಿ ಮೀನುಗಾರರು ಸದಸ್ಯರಾಗಿರುತ್ತಾರೆ. ಆದುದರಿಂದ ಮೀನುಗಾರರನ್ನು ಸೇರಿಸಿ ಸಮಿತಿ ರಚಿಸಿ ಆ ಸಮಿತಿಗೆ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಕೊಟ್ಟಿರುವ ಉತ್ತರ ಸರಿ ಇದೆ. ಆದರೆ fraud ಆಗಿ ಕೆಲವರು ಬಂಡವಾಳ ಶಾಹಿಗಳು ನಿಮಗೂ ಗೊತ್ತಿದೆ. ಒಬ್ಬ ನಂಜೇಗೌಡ ಎನ್ನುವವನು federation ನಲ್ಲಿ ಸಿಕ್ಕಾಪಟ್ಟೆ, ಮೀನನ್ನು ಹಿಡಿದರೂ ಹಿಡಿಯಬಹುದು. ಆದರೆ ಅವರನ್ನು ಹಿಡಿಯುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ದಯವಿಟ್ಟು ಬಂಡವಾಳ ಶಾಹಿಗಳ ಕೈಗೆ ಸಿಗದೇ ಮೀನುಗಾರರ ರಕ್ಷಣೆಗೆ ಮಾಡಬೇಕು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಪುಟ್ಟಣ್ಣಯ್ಯನವರೆ ತಪ್ಪಾಗಿ ಮಾತನಾಡುತ್ತಿದ್ದೀರಿ. ತಿಮಿಂಗಲವನ್ನು ಬೇಕಾದರೆ ಹಿಡಿಯಬಹುದು! ಅವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ಅದನ್ನು ಒಪ್ಪಿಕೊಳ್ಳಬಹುದು. ಆದ್ದರಿಂದ ಅವರು ನಿಮ್ಮನ್ನು ನುಂಗಿದರೂ ನುಂಗಬಹುದು, ಹುಷಾರಾಗಿರಿ ಅಷ್ಟೆ. ದಯವಿಟ್ಟು ನಿಜವಾಗಿಯೂ ಮೀನನ್ನು ಹಿಡಿದು ಬದುಕುತ್ತಿರುವಂಥ ಜನರಿಗೆ ರಕ್ಷಣೆ ಕೊಡಬೇಕು. ಮೀನು ಹಿಡಿಯುವವರಿಗೆ insurance ಮಾಡಿಸುವಂಥದ್ದು ಮಾಡಬೇಕು. ಏಕೆಂದರೆ, ಅವರ ಮೈ ವಾಸನೆ ಇರುತ್ತದೆ, ಅಷ್ಟೊಂದು ವಾಸನೆಯಲ್ಲಿ ಮೀನನ್ನು ಹಿಡಿದು ಬದುಕುತ್ತಾರೆ. ಅವರ ಆರೋಗ್ಯ ರಕ್ಷಣೆಗೆ ಮತ್ತು ಬದುಕಿನ ರಕ್ಷಣೆ ಬಗ್ಗೆ ಆರ್ಥಿಕವಾದ ಆಲೋಚನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಅಭಯಚಂದ್ರ:– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಹೊಸ ಸರ್ಕಾರ ಬಂದ ಮೇಲೆ, ಒಂದು ಹೊಸ ಕಾನೂನನ್ನೇ ಮಾಡಿದ್ದೇವೆ. ಮೀನುಗಾರ ವೃತ್ತಿಯನ್ನು ಯಾರು

ಮಾಡುತ್ತಾರೆ, ಅವರ ಸಹಕಾರ ಸಂಘಕ್ಕೆ ಇವತ್ತು ಮೀನು ಹಿಡಿಯುವ ಹಕ್ಕನ್ನು ಕೊಡುವಂಥ ವಿಶೇಷವಾದಂಥ ಕೆಲಸ ಈ ಸರ್ಕಾರದಲ್ಲಿ ಆಗುತ್ತಿದೆ. ಯಾವ ತಿಮಿಂಗಲವೂ ನಮ್ಮನ್ನು ನುಂಗುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ. ಅದೇ ರೀತಿ ಎಷ್ಟೇ ಬಲಶಾಲಿಗಳಾಗಲಿ, ಅಂಥ ಬಂಡವಾಳಶಾಹಿಗಳಿಗೆ ನಾವು ತಲೆ ಬಗ್ಗಿಸುವುದಿಲ್ಲ. ಅವರನ್ನು ಮಟ್ಟ ಹಾಕುವಂಥ ಕೆಲಸವನ್ನು ಮಾಡುತ್ತೇವೆ. ಮೀನುಗಾರರು ಯಾರು ಮೀನು ಹಿಡಿಯುತ್ತಾರೆ, ಆ ದುಡಿಯುವ ಜನರಿಗೆ ಹಕ್ಕನ್ನು ಕೊಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎನ್ನುವುದನ್ನು ಇಲ್ಲಿ ವ್ಯಕ್ತಪಡಿಸಿ, ಅದೇ ರೀತಿ ತಾವು insurance ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಸಮಾಲೋಚನೆ ಮಾಡಿ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಅಧ್ಯಕ್ಷರೆ, ಇದೇ ವಿಚಾರವಾಗಿ ಸುಮಾರು 150 ಜನ ಮೀನು ಹಿಡಿಯುವಥವರು, ಇವರಿಬ್ಬರ ತಿಕ್ಕಾಟದಲ್ಲಿ ಮೀನು ಹಿಡಿದು ಬದುಕುವಂಥ ನೂರಾರು ಕುಟುಂಬಗಳು ಇವತ್ತು ಬೆಂಗಳೂರಿಗೆ ಬಂದಿದ್ದರು. ಅವರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಇವರಿಬ್ಬರು ಏನು ಬೇಕಾದರೂ ಜಗಳ ಮಾಡಲಿ, ಆದರೆ ಮೀನು ಹಿಡಿಯುವ ಬಡವ ಅವನಿಗೆ ಸರ್ಕಾರದ ನೀತಿ ಏನು ಮಾಡಿದ್ದೀರಿ? ಮೀನು ಹಿಡಿಯುವವನಿಗೆ ಅರ್ಧ ಕೊಡುವಂಥದ್ದು, ಸೊಸೈಟಿಗೆ ಅರ್ಧ ಕೊಡುವಂಥ policy mark ಏನು ಮಾಡಿದ್ದೀರಿ ಅದು ಸರಿ ಇದೆ. ಆದರೆ ಮೀನು ಹಿಡಿಯುವವರಿಗೆ ಮೀನು ಹಿಡಿಯಬೇಡಿ ಎಂದು ಆದೇಶವನ್ನು ಮಾಡಿದ್ದಾರೆ. ದಯಮಾಡಿ ಅದನ್ನು ಆ ಬಲೆಯಲ್ಲಿ ಹಿಡಿಯತಕ್ಕಂಥದ್ದಕ್ಕೆ ಸರ್ಕಾರದಿಂದ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಸಚಿವರೆ, ದಯಮಾಡಿ ಮಾರಿ ಬಲೆಗೆ ಅವಕಾಶ ಕೊಡಬೇಡಿ.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಅಧ್ಯಕ್ಷರೆ, ಅದು ಮಾರಿ ಬಲೆಯಲ್ಲ. ಮಾರಿ ಬಲೆ ಅಂದರೆ ನದಿಯ ಹಿನ್ನೀರನಲ್ಲಿ 7–8 ಅಡಿಯಲ್ಲಿ ಹಿಡಿಯುವಂತ ಬಲೆ ಅದು. ಆದರೆ 40–50 ವರ್ಷಗಳಿಂದ ಆ ಜನ ಅದೇ ಜೀವನವನ್ನು ಮಾಡಿಕೊಂಡು ಬರುತ್ತಿದ್ದಾರೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಆ ಜನ ಯಾರೆಂದರೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟುವುದಕ್ಕೋಸ್ಕರ ವಾಸವಿದ್ದಂಥ ಜನರನ್ನು ಸ್ಥಳಾಂತರಿಸಿದರು. ಆರು ಅಡಿ ಏಳು ಅಡಿ ನೀರಿನಲ್ಲಿ ಅವರು ಬಲೆ ಬಿಟ್ಟು ಮೀನು ಹಿಡಿಯುತ್ತಾರೆ. ಹಿಡಿದಂಥ ಮೀನಿನಲ್ಲಿ ಅರ್ಧವನ್ನು ಗುತ್ತಿಗೆದಾರನಿಗೆ ಕೊಡುತ್ತಾರೆ. ಉಳಿದರ್ಧವನ್ನು ತೆಗೆದುಕೊಂಡು ಹೋಗಿ ಅವನು ಬದುಕುತ್ತಿದ್ದಾನೆ. ಅವರು ಮೀನು ಹಿಡಿಯಬಾರದು ಎಂದು ಸರ್ಕಾರದ ಆದೇಶವಾಗಿದೆ.

ಶ್ರೀ ಸಾ.ರಾ. ಮಹೇಶ್:– ಬಲೆಯಲ್ಲಿ ಮೀನು ಹಿಡಿಯಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ನಾರಾಯಣಗೌಡ:– ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನಲ್ಲೂ ಅದೇ ರೀತಿ ಅನ್ಯಾಯವಾಗುತ್ತಿದೆ. ಮೀನು ಹಿಡಿಯುವ ಬಡ ವ್ಯಕ್ತಿಗಳಿಂದ ಗುತ್ತಿಗೆದಾರರು ಅರ್ಧಕ್ಕಿಂತಲೂ ಹೆಚ್ಚಾಗಿ ಕಿತ್ತುಕೊಳ್ಳುತ್ತಾರೆ. ಅವರೇನಾದರೂ ಕೊಡದೇ ಹೋದರೆ ಕೈಕಾಲುಗಳನ್ನು ಮುರಿದು ಆಸ್ಪತ್ರೆಗೆ ಸೇರಿಸುವಂಥ ಸ್ಥಿತಿಗೆ ತರುತ್ತಾರೆ. ಅವರಲ್ಲಿ ಅಷ್ಟೊಂದು ಭಯಭೀತಿಯನ್ನು ಹುಟ್ಟುಹಾಕಿದ್ದಾರೆ. ಅಂಥವರಿಗೆ ನ್ಯಾಯ ಕೊಡಬೇಕು ಎಂದು ಮೀನುಗಾರಿಕಾ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಂಜೇಗೌಡ ಎನ್ನುವ ಆ ವ್ಯಕ್ತಿ ಎಲ್ಲ ಕಡೆ ಪ್ರವೇಶ ಮಾಡಿ ಮೀನು ಹಿಡಿಯುವಂಥ ಮೀನುಗಾರರನ್ನು ಶೋಷಣೆ ಮಾಡಿ ಅವನು ಬದುಕತಕ್ಕಂಥ ಕೆಲಸವನ್ನು ಮಾಡುತ್ತಿದ್ದಾನೆ. ಅವನ ಮೇಲೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು, ನಿಜವಾಗಿಯೂ ಮೀನು ಹಿಡಿಯುವವರಿಗೆ ಸಹಕಾರ ಕೊಡಬೇಕು.

ಶ್ರೀ ಸಾ.ರಾ. ಮಹೇಶ್:– ಬಲೆಯಲ್ಲಿ ಮೀನು ಹಿಡಿಯುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಅಭಯಚಂದ್ರ:– ಯಾವುದೇ ಬಲಶಾಲಿ ವ್ಯಕ್ತಿಗಳಿಗೆ ನಾವು ಮಣಿಯುವುದಿಲ್ಲ. ಪ್ರಾಮಾಣಿಕವಾಗಿ ಯಾರು ಮೀನು ಹಿಡಿಯುತ್ತಾರೆ ಅವರಿಗೆ ಸಹಕಾರವನ್ನು ಕೊಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ.

ಶ್ರೀ ನಾರಾಯಣಗೌಡ:– ಹೋದ ಸಾರಿಯೂ ನಾವು ಕಂಪ್ಲೇಂಟ್ ಕೊಟ್ಟಿದ್ದೆವು. ಆ ನಂಜೇಗೌಡ ಎನ್ನುವವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಕೇಸ್ ಬುಕ್ ಮಾಡಿಲ್ಲ, ಒಳಗಡೆ ಹಾಕಿಲ್ಲ.

ಶ್ರೀ ಕೆ. ಅಭಯಚಂದ್ರ:– 2017ರವರೆಗೆ ಅವರಿಗೆ ಗುತ್ತಿಗೆ ಇದೆ. ಹಣ ಸರಿಯಾಗಿ ಕೊಡುತ್ತಿಲ್ಲ ಎಂದು ತಾವು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಮಾಡಿ ಶೇಕಡ 50ರಷ್ಟು ಮೀನನ್ನೇ, ಯಾರು ಮೀನು ಹಿಡಿಯುತ್ತಾರೆ ಅವರಿಗೆ ಕೊಡಬೇಕು ಎನ್ನುವ ಆದೇಶ ಮಾಡಿದ್ದಾರೆ. ಹಾಗೆ ಕೊಡದಿದ್ದರೆ ಅವರನ್ನು ಬಿಡುವುದಿಲ್ಲ, ಕೇಸ್ ಹಾಕಿ ಅವರನ್ನು ಒಳಗೆ ಹಾಕುವಂಥ ಕೆಲಸವನ್ನು ಮಾಡುತ್ತೇವೆ. ಹಾಗಾಗಿ, ಯಾರಿಗೂ ಹೆದರುವಂಥ ಪ್ರಶ್ನೆಯೇ ಇಲ್ಲ.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಿದೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಮೀನು ಹಿಡಿಯುವವರಿಗೆ ಆ ರೀತಿ ಶೇಕಡಾ 50ರಷ್ಟು ಮೀನನ್ನೂ ಕೊಡುತ್ತಿಲ್ಲ.

ಶ್ರೀ ಸಾ.ರಾ. ಮಹೇಶ್:– ಬಲೆಯಲ್ಲಿ ಮೀನು ಹಿಡಿಯಲು ಅವಕಾಶ ಮಾಡಿಕೊಡಿ.

ಶ್ರೀ ಎಸ್. ಚಿಕ್ಕಮಾದು:– ಬಲೆ ಇಲ್ಲದೇ ಮೀನು ಹೇಗೆ ಹಿಡಿಯುವುದು? ಬಲೆಯನ್ನೇ ಹಾಕಬೇಡಿ ಎಂದರೆ ಹೇಗೆ?

ಅಧ್ಯಕ್ಷರು:– ಅವರಿಗೆ ಕೊಟ್ಟಿರುವ ಗುತ್ತಿಗೆ ಕರಾರಿನ ವಾಯಿದೆ ಇನ್ನೂ ಮುಗಿದಿಲ್ಲ ಎಂದು ಸಚಿವರು ಹೇಳಿದ್ದಾರೆ. ವಾಯಿದೆ ಮುಗಿದ ಮೇಲೆ ಮೀನನ್ನು ಹಿಡಿಯುವವರಿಗೇ ಕೊಡುತ್ತಾರೆ.

ಶ್ರೀ ನಾರಾಯಣಗೌಡ:– ಅದುವರೆಗೂ ಬಡವರು ತಮ್ಮ ಹೊಟ್ಟೆಯನ್ನು ಹೇಗೆ ಸಾಕುತ್ತಾರೆ ಎಂದು ಹೇಳಿ. ಅಷ್ಟೊಂದು ಭಯವನ್ನು ಉಂಟುಮಾಡಿದ್ದಾರೆ. ಹೊರಗಿನಿಂದ ಜನ ಕರೆದುಕೊಂಡು ಬಂದು ಗೂಂಡಾಗಿರಿ ಮಾಡುತ್ತಿದ್ದಾರೆ.

ಅಧ್ಯಕ್ಷರು:– ಆಯಿತು ಬಿಡಿ, ಸಾಕು. ಈಗ ಮುಂದಿನ ಪ್ರಶ್ನೆ, ಬಿ.ಶಿವಣ್ಣನವರು.

ಕ್ರೀಡಾಂಗಣ ನವೀಕರಣ ಮಾಡುವುದು

234(2669); ಶ್ರೀ ಶಿವಣ್ಣ ಬಿ. (ಆನೇಕಲ್)

ಅ) ಆನೇಕಲ್ ಪಟ್ಟಣದಲ್ಲಿರುವ ಕ್ರೀಡಾಂಗಣವು ಅವ್ಯವಸ್ಥೆಯ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹದಗೆಟ್ಟಿರುವ ಕ್ರೀಡಾಂಗಣವನ್ನು ನವೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ, ಕ್ರೀಡಾಂಗಣದ ನವೀಕರಣವನ್ನು ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು; (ಮಾಹಿತಿ ನೀಡುವುದು)?

ಶ್ರೀ ಕೆ. ಅಭಯಚಂದ್ರ: (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಆನೇಕಲ್ ಪಟ್ಟಣದಲ್ಲಿರುವ ಕ್ರೀಡಾಂಗಣವು ಅವ್ಯವಸ್ಥೆಯ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಹದಗೆಟ್ಟಿರುವ ಕ್ರೀಡಾಂಗಣವನ್ನು ನವೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ.